**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No. 124/2018

CW -2 PW - 2

| | | |
|---|---|---|
| ಹೆಸರು | ಃ | ಶಿವಣ್ಣ |
| ತಂದೆಯ ಹೆಸರು | ಃ | ಚಿಕ್ಕರಾಮಯ್ಯ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ಅಚ್ಚಲು |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 18.08.2022

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಆತ ಕೆ ಎಸ್ ಆರ್ ಟಿ ಸಿ ಬಸ್ ಚಾಲಕನಾಗಿದ್ದಾನೆ. ಚಾಸಾ-1, 3 ರಿಂದ 6 ನನಗೆ ಗೊತ್ತು.

ದಿಃ13.04.2017 ರಂದು ರಾತ್ರಿ 9.30 ಗಂಟೆಗೆ ನಾನು ನನ್ನ ಅಕ್ಕನ ಮನೆಯಾದ ಚಿಕ್ಕಾಲಹಳ್ಳಿಗೆ ಕೆ ಎಸ್ ಆರ್ ಟಿ ಸಿ ಬಸ್ ನಲ್ಲಿ ಹೋಗುತ್ತಿದ್ದೆ. ನಾನು ಬಸ್ ನ ಹಿಂಭಾಗದಲ್ಲಿ ಕುಳಿತುಕೊಂಡಿದ್ದೆ. ಆಗ ಬಸ್ ಮೇಲಕ್ಕೆ ಹೋಗಿ ಕೆಳಗೆ ಬಂದ ಹಾಗೆ ಆಯಿತು. ರಸ್ತೆಯಲ್ಲಿ ಹುಬ್ಬು ಇದ್ದ ಕಾರಣ ಬಸ್ ಅದರ ಮೇಲೆ ಏಕಾಏಕಿ ಹೋದ ಪರಿಣಾಮ ನಾನು ಸೀಟಿನ ಮುಂಭಾಗದ ಕಂಬಕ್ಕೆ ನನ್ನ ಎದೆ ಡಿಕ್ಕಿ ಆಗಿ ಕೆಳಗೆ ಬಿದ್ದೆ. ಆಗ ನಾನು ಪ್ರಜ್ಞೆ ತಪ್ಪಿದೆ. ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾದಾಗ ನನ್ನ ಎಡಭಾಗದ ಪಕ್ಕೆಯ ಮೂಳೆ ಮುರಿದಿರುವ ವಿಷಯ ನನಗೆ ತಿಳಿಯಿತು.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯಾೀಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುಗೆ ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)**

ಅಪಘಾತವು ದಿಃ26.03.2017 ರಂದು ಆಗಿದೆ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ ನಂ. ಕೆಎ-40-ಎಫ್ 66 ಆಗಿದ್ದು ಸದರಿ ಬಸ್ ನ ಚಾಲಕ ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ವಾಹನ ಚಲಾಯಿಸಿ ಹುಬ್ಬು ಹತ್ತಿಸಿದ ಕಾರಣ ಅಪಘಾತವಾಗಿದೆ ಎಂದರೆ ಸರಿ. ನಾನು ಸದರಿ ಅಪಘಾತದ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆಂದರೆ ಸರಿ.

ಸದರಿ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ಕೆ ಎನ್ ಜಿ ವಕೀಲರಿಂದಃ</u>**

8.30 ರ ಸಮಯದಲ್ಲಿ ಸಾತನೂರುನಿಂದ ಚಿಕ್ಕಾಲಹಳ್ಳಿಗೆ ಹೋಗುವ ಬಸ್ ಗಳ ವಾಹನ ಚಲಾವಣೆ ನಿಂತಿರುತ್ತದೆ ಎಂದರೆ ಸರಿಯಲ್ಲ. ಸಾತನೂರಿನಿಂದ ಚಿಕ್ಕಾಲಹಳ್ಳಿಗೆ ಸುಮಾರು 6 ಕಿ.ಮೀ ದೂರವಿದೆ. ಸಾತನೂರಿನಿಂದ ಚಿಕ್ಕಾಲಹಳ್ಳಿಗೆ 9 ಗಂಟೆ ನಂತರ ಯಾವುದೇ ಬಸ್ ಹೋಗುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಬಸ್ ನಲ್ಲಿ 9 ರಿಂದ 12 ಜನ ಪ್ರಯಾಣ ಹೋಗುತ್ತಿದ್ದೆವು. ಅಪಘಾತವಾದಾಗ ಬೇರೆಯವರಿಗೂ ಸಹ ಗಾಯಗಳಾಗಿವೆ. ಯಾವ ಜಾಗದಲ್ಲಿ ಅಪಘಾತವಾಗಿದೆ ಎಂದು ನನಗೆ ಗೊತ್ತು. ಅಪಘಾತ ಪೋಲೀಸ್ ಠಾಣಾ ಮುಂಭಾಗದಲ್ಲಿ ಆಗಿರುತ್ತದೆ. ಅಪಘಾತ ಪೋಲೀಸ್ ಠಾಣೆಯ ಮುಂದಿನ ರಸ್ತೆಯಲ್ಲಿ ಆಗಿರುತ್ತದೆ. ಆ ದಿನ ಪ್ರಯಾಣಿಸುವಾಗ ನಾನು ಟಿಕೆಟ್ ಪಡೆದಿದ್ದೇನೆ. ಸದರಿ ಟಿಕೆಟ್ ನ್ನು ಪೋಲೀಸರು ನನ್ನಿಂದ ಕೇಳಿ ಪಡೆದಿಲ್ಲ. ನಾನು ಪೋಲೀಸ್ ಠಾಣೆಗೆ ಒಂದು ಬಾರಿ ಹೋಗಿದ್ದೇನೆ. ಚಾಸಾ-1, 3 ರಿಂದ 6 ರವರು ನನ್ನ ಸಂಬಂಧಿಗಳು. ನಾನು ಆರೋಪಿಯನ್ನು ಈ ಮುಂಚೆ ಅಪಘಾತವಾದಾಗ ಬಸ್ ನಲ್ಲಿ ನೋಡಿದ್ದೇನೆ. ನಾನು ಬಸ್ ಹಿಂಬದಿಯಲ್ಲಿ ಕುಳಿತಿದ್ದ ಕಾರಣ ಚಾಲಕನನ್ನು ನೋಡಿಲ್ಲ ಎಂದರೆ ಸರಿಯಲ್ಲ. ಮುಂದುವರಿದು ಸಾಕ್ಷಿ ನ್ಯಾಯಾಲಯದ ಮುಂದಿರುವ ಚಾಲಕ ನನ್ನನ್ನು ಸಾತನೂರು ಆಸ್ಪತ್ರೆಗೆ ದಾಖಲಿಸಿದ್ದ ಎಂದು ನುಡಿಯುತ್ತಾರೆ. ನಾನು ಅಪಘಾತವಾಗಿದೆ ಎಂದು ಹೇಳಿದ ದಿನ ಯಾವುದೇ ಬಸ್ ನಲ್ಲಿ ಪ್ರಯಾಣಿಸಿಲ್ಲ, ನನಗೆ ಯಾವುದೇ ಗಾಯಗಳಾಗಿಲ್ಲ, ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಮುಂಚೆ ನಾನು ಆರೋಪಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳಲು ನಾವು ಒಟ್ಟಿಗೆ ಬಂದಿದ್ದೇವೆಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣದ ಘಟನೆಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ

**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No. 124/2018

CW -1 PW - 1

| | | |
|---|---|---|
| ಹೆಸರು | ಃ | ಆನಂದ್ ಕುಮಾರ್ |
| ತಂದೆಯ ಹೆಸರು | ಃ | ಲೇಟ್ ಶಿವಲಿಂಗಯ್ಯ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ಸೆಕ್ಯೂರಿಟಿ ಆಫೀಸರ್ |
| ವಾಸ | ಃ | ರಾಮನಗರ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 18.08.2022

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ನಾನು ಆತನನ್ನು ಸಾತನೂರಿನಲ್ಲಿ ನೋಡಿದ್ದೆ. ಚಾಸಾ-2 ರಿಂದ 6 ರವರು ನನಗೆ ಗೊತ್ತು.

ಸಾಕ್ಷಿಗೆ ದೂರನ್ನು ತೋರಿಸಿದ್ದು, ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಗುರುತಿಸಲಾಯಿತು. ದಿಃ13.04.2017 ರಂದು ಸಾತನೂರು ಠಾಣೆಯಲ್ಲಿ ನಾನೇ ದೂರನ್ನು ದಾಖಲಿಸಿದ್ದೆನು.

ದಿಃ13.04.2017 ರಂದು ರಾತ್ರಿ 9.30 ಗಂಟೆಗೆ ಚಾಸಾ-2 ರವರು ಸಾತನೂರಿನಿಂದ ಚಿಕ್ಕಹಳ್ಳಿಗೆ ಬಸ್ ನಲ್ಲಿ ನಿಂತುಕೊಂಡು ಹೋಗುತ್ತಿದ್ದರು. ಬಸ್ ಚಾಲಕ ಹುಬ್ಬು ನೋಡದೇ ವಾಹನವನ್ನು ಹಾಗೆಯೇ ಚಲಾಯಿಸಿದ್ದಾನೆ, ಅದರ ಪರಿಣಾಮವಾಗಿ ನನ್ನ ಬಾಮೈದನು ಎಗರಿ ಬಸ್ ನ ರಾಡ್/ಸೀಟಿನ ಮುಂಭಾಗದ ಕಂಬದ ಮೇಲೆ ಬಿದ್ದಾಗ ಆತನ ಎದೆಗೆ ನೋವಾಗಿದೆ ಮತ್ತು ಪಕ್ಕೆಯ ಮೂಳೆ ಮುರಿದಿದೆ. ಬಸ್ ಚಾಲಕ ನನ್ನ ಬಾಮೈದನಿಗೆ ಸಾತನೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸಿದ್ದಾನೆ. ಸದರಿ ಆಸ್ಪತ್ರೆಯವರು ಆತನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗುವಂತೆ ಹೇಳಿದಾಗ ನನ್ನ ಬಾಮೈದನನ್ನು ಮುಂದಿನ ಚಿಕಿತ್ಸೆಗೆ ಚಾಸಾ-3 ಮತ್ತು ನಾನು ಆತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋದೆವು. 26 ದಿನ ಚಿಕಿತ್ಸೆಗಾಗಿ ಅಲ್ಲಿಯೇ ಇರಿಸಿಕೊಂಡಿದ್ದರು. ನಂತರ ದಿಃ26.04.2017 ರಂದು ನಾನು

ಸಾತನೂರು ಪೋಲೀಸ್ ಠಾಣೆಗೆ ಬಂದು ದೂರ ದಾಖಲಿಸಿದ್ದೇನೆ.

ನಂತರ ಪೋಲೀಸರು ಬಂದು ಸ್ಥಳದ ಮಹಜರ್ ಮಾಡಿದರು. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು ಮಹಜರ್ ನ್ನು ನಿಪಿ-2 ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುಗೆ ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)**

ಅಪಘಾತವು ದಿಃ26.03.2017 ರಂದು ರಾತ್ರಿ 9.30 ಗಂಟೆಗೆ ಎಂದರೆ ಸರಿ. ನಾನು ದಿಃ13.04.2017 ರಂದು ದೂರನ್ನು ದಾಖಲಿಸಿದ್ದೇನೆಂದರೆ ಸರಿ. ಪೋಲೀಸರು ಅದೇ ದಿನ ಮಹಜರ್ ಮಾಡಿದ್ದಾರೆಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ ಕೆ ಎನ್ ಜಿ ವಕೀಲರಿಂದಃ**

ನನ್ನ ಊರು ರಾಮನಗರ. ರಾಮನಗರಕ್ಕೂ ಸಾತನೂರಿಗೂ ಸುಮಾರು ಬಾರಿ ಬಂದು ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ನನ್ನ ಬಾಮೈದನನ್ನು ದಾಖಲಿಸಿದಾಗ ರಾಮನಗರಕ್ಕೆ ಬಂದು ಹೋಗಿ ಮಾಡಿದ್ದೇನೆ. ನಾನು ಅಪಘಾತವಾದ ವಾಹನದಲ್ಲಿ ಸಂಚಾರ ಮಾಡಿರಲಿಲ್ಲ. ನನ್ನ ಬಾಮೈದ ಅಪಘಾತವಾದ ವಾಹನದಲ್ಲಿ ಸಂಚಾರ ಮಾಡುತ್ತಿದ್ದ ಎಂದು ತೋರಿಸಲು ಯಾವುದೇ ಟಿಕೆಟ್ ನ್ನು ಹಾಜರು ಪಡಿಸಿಲ್ಲ. ನನ್ನ ಬಾಮೈದ ಬಸ್ ನಲ್ಲಿ ಹೋಗುತ್ತಿದ್ದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಅಪಘಾತವಾದ ಸ್ಥಳ ಹಾಗೂ ಹಂಪ್ ನ ಬಗ್ಗೆ ನಿರ್ದಿಷ್ಟವಾದ ಮಾಹಿತಿಯನ್ನು ನಾನೇನು ಪೋಲೀಸರಿಗೆ ನೀಡಿಲ್ಲ. ನನ್ನ ಬಾಮೈದನಿಗೆ 32 ವರ್ಷ ವಯಸ್ಸು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಈ ದಿನ ಬಿಟ್ಟರೇ ಮುಂಚೆ ನೋಡಿರಲಿಲ್ಲ.

ನನ್ನ ಬಾಮೈದನನ್ನು ಆಸ್ಪತ್ರೆಗೆ ಆಂಬ್ಯುಲೆನ್ಸನಲ್ಲಿ ಕರೆದುಕೊಂಡು ಹೋದೆ. ಸಾತನೂರು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ಬಗ್ಗೆ ನ್ಯಾಯಾಲಯದಲ್ಲಿ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ. ಚಾಸಾ-2 ರಿಂದ 6 ನನ್ನ ಪರಿಚಯಸ್ಥರು. ನನ್ನ ಬಾಮೈದ ಆರೋಪಿ ವಾಹನದಲ್ಲಿ ಸಂಚಾರ ಮಾಡಿಲ್ಲ, ಆತನಿಗೆ ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ.

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಪೋಲೀಸ್ ಠಾಣೆಗೆ ಹೋದಾಗ ನನ್ನ ಸಂಬಂಧಿಕರು ಮತ್ತು ಪೋಲೀಸರು ಮಾತ್ರ ಇದ್ದರು. ನಾವು ಪೋಲೀಸ್ ಠಾಣೆ ಬಿಟ್ಟು ಬೇರೆ ಎಲ್ಲೂ ಹೋಗಿಲ್ಲ ಅಲ್ಲೇ ಸಹಿ ಮಾಡಿರುತ್ತೇನೆ. ನಿಪಿ-2 ಕ್ಕೆ ಚಾಸಾ-3 ಮುತ್ತುರಾಜು, ನಾನು ಮತ್ತು ಪೋಲೀಸರು ಸಹಿ ಮಾಡಿರುತ್ತೇವೆ. ನಿಪಿ-2 ರ ಮಹಜರ್ ಮಾಡುವಾಗ ಬಸ್ ಠಾಣೆಯಲ್ಲಿ ಇರಲಿಲ್ಲ. ಬಸ್ ನಂಬರ್ ನನಗೆ ಗೊತ್ತು. ಕೆಎ-40-ಎಫ್ ಒ-66 ಕೆಂಪು ಬಣ್ಣದ ಬಸ್. ಸರ್ಕಾರಿ ಬಸ್ ಗಳು ಕೆಂಪು ಬಣ್ಣ ಬಸ್ ಗಳಾಗಿರುತ್ತವೆಂದು ನನಗೆ ಗೊತ್ತು. ಯಾವುದೇ ಅಪಘಾತವಾಗಿಲ್ಲ, ಯಾವುದೋ ದಿನ ಆದ ಗಾಯವನ್ನು ಈ ಪ್ರಕರಣದ ಅಪಘಾತದಲ್ಲಿ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ವಿಮಾ ಹಣ ಪಡೆಯಲು ಸುಳ್ಳು ಪ್ರಕರಣ ದಾಖಲಿಸಿದ್ದೇವೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ